ಇ) ಕ್ರಮ ಕೈಗೊಂಡಿಲ್ಲದ ಪಕ್ಷದಲ್ಲಿ ವಾಹನವನ್ನು 1991–92ನೇ ಆರ್ಥಿಕ ಸಾಲಿನಲ್ಲಿಯೇ ಪೂರೈಸಲು ಕ್ರಮ ಕೈಗೊಳ್ಳಲಾಗುವುದೇ ;

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಬಂದಿರುವುದು.

ಆ) ಬಂದಿದೆ.
ಸರಬರಾಜು ಮಾಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಪರಿಶೀಲನೆಯಲ್ಲಿದೆ.

ವಿಶೇಷ ಘಟಕ ಯೋಜನೆಯಡಿಯಲ್ಲಿ ಒದಗಿಸಿರುವ ಹಣ

1135. ಶ್ರೀ ಜಿ. ಪರಮೇಶ್ವರ (ಮಧುಗಿರಿ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ–

ಅ) ವಿಶೇಷ ಘಟಕಯೋಜನೆ ಕಾರ್ಯಕ್ರಮಗಳಿಗೆ ರಾಜ್ಯದಲ್ಲಿ ಒದಗಿಸಿರುವ ಒಟ್ಟು ಹಣವೆಷ್ಟು;

ಆ) ಈ ಯೋಜನೆಗೆ ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು) ;

ಇ) ಈ ಹಣದಲ್ಲಿ ಜಿಲ್ಲೆಗಳಲ್ಲಿ ವೆಚ್ಚ ಮಾಡಲಾದ ಒಟ್ಟು ಹಣವೆಷ್ಟು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) –

ಅ) ರಾಜ್ಯದಲ್ಲಿ ವಿಶೇಷ ಘಟಕ ಯೋಜನೆಗೆ 1991–92 ರ ಸಾಲಿಗೆ ರೂ. 15,051–14 ಲಕ್ಷಗಳನ್ನು ಒದಗಿಸಲಾಗಿದೆ.

ಆ) ಸದರಿ ಯೋಜನೆಗೆ 1991ರ ಡಿಸೆಂಬರ್ ಅಂತ್ಯದ ವರೆವಿಗೆ ರೂ.1432.48 ಲಕ್ಷಗಳನ್ನು ಜಿಲ್ಲಾ ಪರಿಷತ್ತ್‌ಗಳಿಗೆ ಬಿಡುಗಡೆ ಮಾಡಲಾಗಿದೆ ಜಿಲ್ಲಾವಾರು ಮಾಹಿತಿ ತಃಖ್ತೆಯನ್ನು ಲಗತ್ತಿಸಲಾಗಿದೆ.

ಇ) ಜಿಲ್ಲಾ ಪರಿಷತ್ತುಗಳು ಒಟ್ಟು ರೂ.961.66 ಲಕ್ಷಗಳನ್ನು ವಿಶೇಷ ಘಟಕ ಯೋಜನೆ ಕಾರ್ಯಕ್ರಮಗಳಿಗೆ ವೆಚ್ಚ ಮಾಡಿದೆ. ಜಿಲ್ಲಾವಾರು ಮಾಹಿತಿಯನ್ನು ಕೊಡಲಾಗಿದೆ.

ವಿಶೇಷ ಘಟಕ ಯೋಜನೆಯ ಕಾರ್ಯಕ್ರಮಗಳಿಗೆ 1991–92ನೇ ಸಾಲಿನಲ್ಲಿ ಜಿಲ್ಲಾವಾರು, ನಿಗದಿಯಾದ ಹಣ ಬಿಡುಗಡೆಯಾದ ಹಣ - ಖರ್ಚು ಮಾಡಲಾದ ಹಣದ ಬಗೆಗಿನ ಮಾಹಿತಿ.

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ನಿಗದಿಯಾದ ಹಣ	ಬಿಡುಗಡೆಯಾದ ಹಣ	ಖರ್ಚು ಮಾಡಲಾದ ಹಣ31–12–91 ರವರೆಗೆ	ಷರಾ
1.	ಬೆಂಗಳೂರುನಗರ	69.34	39.64	24.79	
2.	ಬೆಂಗಳೂರು (ಗ್ರಾ)	224.67	84.81	49.96	
3.	ಚಿತ್ರದುರ್ಗ	100.89	54.84	50.08	
4.	ಕೋಲಾರ	217.07	83.92	32.41	
5.	ತುಮಕೂರು	162.84	67.31	55.42	
6.	ಶಿವಮೊಗ್ಗ	142.25	69.28	37.32	
7.	ಮೈಸೂರು	202.00	98.49	63.33	

8.	ಮಂಡ್ಯ	135.91	109.90	60.66
9.	ಹಾಸನ	122.34	56.12	44.17
10.	ಚಿಕ್ಕಮಗಳೂರು	94.36	64.13	41.22
11.	ಕೊಡಗು	56.71	32.25	31.97
12.	ದಕ್ಷಿಣ ಕನ್ನಡ	127.71	62.13	45.88
13.	ಬೆಳಗಾಂ	167.39	80.13	54.45
14.	ಬಿಜಾಪುರ	195.57	86.20	48.02
15.	ಧಾರವಾಡ	190.50	69.08	63.77
16.	ಕಾರವಾರ	59.95	27.36	28.93
17.	ಗುಲ್ಬರ್ಗಾ	266.58	120.80	82.68
18.	ರಾಯಚೂರು	251.51	110.63	56.66
19.	ಬಳ್ಳಾರಿ	111.62	54.40	43.30
20.	ಬೀದರ್	106.18	61.06	46.64
	ಒಟ್ಟು ರೂ.	3005.39	1432.48	961.66

ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯಗಳ ಬಗ್ಗೆ

1136. ಶ್ರೀ ಜಿ. ಪರಮೇಶ್ವರ (ಮಧುಗಿರಿ):– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ–

ಅ) 1991–92ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳಿಗಾಗಿ ಎಷ್ಟು ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ತೆರೆದಿದ್ದೀರಿ ? (ಜಿಲ್ಲಾವಾರು ಮಾಹಿತಿ ನೀಡುವುದು) ;

ಆ) ಇನ್ನು ಎಷ್ಟು ವಿದ್ಯಾರ್ಥಿ ನಿಲಯಗಳು ಬೇಕಾಗಿದೆ ;

ಇ) ಇದರ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) –

ಅ) 87 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಹಾಗೂ 9 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಈ ಕೆಳಕಂಡಂತೆ ತೆರೆಯಲಾಗಿದೆ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಸಂಖ್ಯೆ	ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯೆ
1	2	3	4
1.	ಬೆಂಗಳೂರು (ನಗರ)	4	2
2.	ಬೆಂಗಳೂರು (ಗ್ರಾ)	4	–
3.	ಚಿತ್ರದುರ್ಗ	5	–
4.	ಕೋಲಾರ	6	1
5.	ತುಮಕೂರು	5	–
6.	ಶಿವಮೊಗ್ಗ	5	–